**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಕಾಂತ ಹುಡೇದ | ಸಿ.ಡಬ್ಲೂ-20 |
| ತಂದೆಯ ಹೆಸರು | : | ಗುರುಪಾದಪ್ಪ | ಪಿ.ಡಬ್ಲೂ-8 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಎ ಎಸ್ ಐ | |
| ವಾಸ ಸ್ಥಳ | : | ಧಾರವಾಡ. | |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ **14-08-2026**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ನಾನು 2022 ರಿಂದ 2025 ರವರೆಗೆ ಧಾರವಾಡ ಸಂಚಾರ ಪೋಲಿಸ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 30–05–2025 ರಂದು ರಾತ್ರಿ 8.15 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಬಂದು ಕಂಪ್ಯೂಟರ್ ಬೆರಳಚ್ಚು ಮಾಡಿದ ದೂರನ್ನು ನೀಡಿದರು . ಅದರನ್ವಯ ಠಾಣಾ ಗುನ್ನಾ ನಂಃ 47/2025 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಕಳಿಸಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ. 1 (ಬಿ ) ಎಂದು ಗುರುತಿಸಲಾಯಿತು. ಪ್ರ ವ ವ ಯನ್ನು ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 14 (ಎ) ಎಂದು ಗುರುತಿಸಲಾಯಿತು.

ದಿಃ 31–05–2025 ರಂದು ಚಾಸಾ–10 ರವರು ತೋರಿಸಿದ ಅಪಘಾತ ಸ್ಥಳಕ್ಕೆ ಭೇಟಿಕೊಟ್ಟು ಚಾಸಾ–2 ಮತ್ತು 3 ರವರನ್ನು ಹಾಜರು ಪಡಿಸಿಕೊಡು

ಪಂಚರಾಗಲು ನೋಟಿಸ್ ನೀಡಿ ಅವರು ಒಪ್ಪಿಕೊಂಡಿದ್ದು ಅವರ ಸಮಕ್ಷಮ ಮುಂಜಾನೆ 10.00 ರಿಂದ 10.30 ಸ್ಥಳ ಪಂಚನಾಮೆ ಮಾಡಿದೆನು . ಅದೇ ಸಮಯಕ್ಕೆ 1 ಪೋಟೋವನ್ನು ತೆಗೆಯಿಸಿದೆನು . ಸಾಕ್ಷಿಯು ಸದರಿ ನೋಟಿಸ್ ಮತ್ತು ಪಂಚನಾಮೆ ಗಳನ್ನು ಗುರುತಿಸಿದ್ದು ನೋಟಿಸ್ ಈಗಾಗಲೇ ನಿಪಿ-2 ಎಂದು , ಹಾಗೂ ಪಂಚನಾಮೆಯನ್ನು ನಿಪಿ.3 ಅಂತಾ ಗುರುತಿಸಲಾಗಿದೆ. ಅವುಗಳ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-2 (ಸಿ) ಮತ್ತು ನಿಪಿ.3(ಸಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಪಿ.4 ರ ಪೋಟೋವನ್ನು ಆ ದಿನ ತೆಗೆಯಲಾಗಿದೆ ಅಂತಾ ಸಾಕ್ಷಿ ನೋಡಿ ಗುರುತಿಸುತ್ತಾರೆ.

ಅದೇ ದಿನ ಚಾಸಾ-9 ಮತ್ತು 10 ರವರ ಹೇಳಿಕೆ ದಾಖಲು ಮಾಡಿಕೊಂಡಿದ್ದೇನೆ. ದಿಃ 02-07-2025 ರಂದು ಗಾಯಾಳು ಶ್ರೀಧರ ಇವರ ಮನೆಗೆ ಭೇಟಿ ಕೊಟ್ಟು ಅವರ ಹೇಳಿಕೆ ದಾಖಲು ಮಾಡಿಕೊಂಡಿದ್ದೇನೆ. ನನಗೆ ದಿಃ 30-07-2025 ರಂದು ನನಗೆ ವರ್ಗಾವಣೆ ಆಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-21 ರವರು ಮಾಡಿದ್ದಾರೆ.

**ಪಾಟೀಸವಾಲು : ಆರೋಪಿ ಪರ ಶ್ರೀ. ಎಮ್ ಜಿ ಆರ್ ವಕೀಲರಿಂದ**

ದೂರನ್ನು ತಯಾರಿಸಿಕೊಂಡು ಬಂದಿದ್ದರು. ನಿಪಿ.1 ರಲ್ಲಿ ಅಪಘಾತ ಪಡಿಸಿದ ವಾಹನದ ನಂಬರ, ಅದು ಯಾವ ಕಂಪನಿಯದ್ದು, ಅದರ ಚಾಲಕ ಯಾರು ಇದ್ದರು ಎಂದು ಉಲ್ಲೇಖಿಸಿಲ್ಲ. ನಿಪಿ.2 ಪಂಚನಾಮೆಯಲ್ಲಿ ಸಹಿತ ಅಪಘಾತ ಪಡಿಸಿದ ವಾಹನದ ನಂಬರ, ಅದು ಯಾವ ಕಂಪನಿಯದ್ದು, ಅದರ ಚಾಲಕ ಯಾರು ಇದ್ದರು ಎಂದು ಉಲ್ಲೇಖಿಸಿಲ್ಲ.

ಶ್ರೀಧರ ಈ ಅಪಘಾತವಾಗುವ ಪೂರ್ವದಲ್ಲಿಯೇ ಬೇರೊಂದು ಅಪಘಾತದಲ್ಲಿ ಗಾಯಾಳು ಆಗಿ ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಹತ್ತಿರ ಪುಟ ಪಾತ ಇದೆ ಎಂದರೆ ಸರಿ. ಪುಟ ಪಾತ 10 ಫೀಟ ಅಗಲ ಇದೆ ಎಂದು ನಾನು ನೋಡಿಲ್ಲ ಶ್ರೀಧರ ಇತನಿಗೆ ಪರಿಹಾರ ಧನ ಸಿಗಲಿ ಅಂತಾ ಹೇಳಿ ಸುಳ್ಳು ದೂರು ದಾಖಲಿಸಿ ಸುಳ್ಳು ಸ್ಥಳ ಪಂಚನಾಮೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.